ಮೈಸೂರ ಗೆಜೆಟ್.

ನಂ. 4 ಸರ್ಕಾರದಿಂದ ಫಾಯಿಷ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಜನವರೀ ತಾ|| 29, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

ಪುಟ

1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ ನಾಮೆಗಳು, ಇಂಡ್ಯ ಗವರ್ನಮೆಂಟನವರ ಇಸ್ತಿಹಾರ ನಾಮೆಗಳು. .. .. 11—14

2ನೇ ಭಾಗ—ಜುಡಿಷಲ್ ಕಮ್ಮಿಷನರು, ಇನಾಂ ಸೂಪರಿಂಟೆಂಡೆಂಟರು, ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರಕ್ಸ ಆಫೀಸರಗಳು, ಮಿಲಿಟರಿ ಅಸಿಸ್ಟೆಂಟರು, ಸರ್ವೇ ವ ಸೆಟಲ್ ಮೆಂಟ್ ಕಮ್ಮಿಷನರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರ್ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರಿಂಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ ನೋಟಿಸಗಳು. .. 25—35

3ನೇ ಭಾಗ—ಇಂಡ್ಯ ಗವರ್ನಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು. .. ..

4ನೇ ಭಾಗ—ಚಿಲ್ಲರೆ ವಿಷಯುಗಳ ಕಾಗದ ಪತ್ರಗಳು.— .. .. 5—6

ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೇ ಪಟ್ಟಿ. .. ..

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್.

ಇಸ್ತಿಹಾರ ನಾಮೆಗಳು.

ನಂ. 338. ತಾರೀಖು 12ನೇ ಜನವರೀ 1876.

ಈ ಕೆಳಗೆ ಬರುವ ತಿದ್ದುಪಡಿಯಾದ ಬೈಲಾನಿಬಂಧನೆಯು ಆಫಿಷಿಯೇಟಿಂಗ್ ಚೀಫ್ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುತ್ತೆ.

2—45 ಕಂಟೋನ್ಮೆಂಟ್ ಸರಹದ್ದಿನೊಳಗೆ 10 ಮಂದಿಗಿಂತಲೂ ಹೆಚ್ಚಾಗಿ ನೌಕರೀ ಇಟ್ಟುಕೊಂಡಿರುವ, ಕಟ್ಟಡಗಳನ್ನು ಕಟ್ಟುವದರಲ್ಲಿ ಪ್ರವರ್ತಿಸಿರುವ ಕಂಟ್ರಾಕ್ಟದಾರ್ರು ವ ಇತರರು ಅಥವಾ ಯಾವದಾದರೂ ಸ್ಥಳದಸ್ವಂತಗಾರ್ರು ಯಾ ಭೋಗೋಟ್ಯೇದಾರ್ರು ತಾವುಗಳು ಯಿಟ್ಟುಕೊಂಡಿರುವ ಕಾರೇಗಾರ್ರಾಧ ವ ಕೂಲಿಯವರಾದ ಗಂಡಸರು ವ ಹೆಂಗಸರು ಯಿವರುಗಳ

ಉಪಯೋಗದ ಬಗ್ಯೆ ತಕ್ಕ ಯೆರಡು ಪಾಯಖಾನೆಗಳನ್ನು ಕಟ್ಟಿಸಿ ದುರಸ್ತು ಇಡತಕ್ಕದ್ದಲ್ಲದೆ ಅಂತಾ ಪಾಯಖಾನೆಗಳನ್ನು ದಿನವಹಿ ಬೆಳಿಗ್ಯೆ 7 ಘಂಟೆಗೆ ಮುಂಚಿತವಾಗಿ ಪಾಕ್‌ಮಾಡಿಸಿ ಇಡತಕ್ಕದ್ದು. ಈ ಬೈಲಾನಿಬಂಧನೆಗೆ ಏನಾದರು ವುಲ್ಲಂಘನೆ ನಡದಲ್ಲಿ ಅದು ಬಗ್ಗೆ ಮೇಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಅಂತಾ ತಪ್ಪಿತ ಮಾಡಿದ ಆಸಾಮಿಯು 20 ರೂಪಾಯಿಗೆ ಜಾಸ್ತೀಯಿಲ್ಲದ ವಂದು ಜುರ್ಮಾನೆಗೆ ಗುರಿಯಾಗುವದಲ್ಲದೆ, ಅಂತಾ ತಪ್ಪಿತ ಪುನಶ್ಚ ನಡಿಸಲ್ಪಡುವ ಪ್ರತಿ ದಿವಸಕ್ಕೂ 10 ರೂಪಾಯಿಗಳ ಜಾಸ್ತೀ ಜುರ್ಮಾನೆಗಳು ಸಹಾ ವಿಧಿಸಲ್ಪಡತಕ್ಕದ್ದು.

ಡಿಕ್ಲೇರೇಷನ್.

ನಂ. 339. ತಾರೀಖು 12ನೇ ಜನವರೀ 1876.

ಸನ್ 1870ನೇ ಇಸವಿಯ 10ನೇ ಆಕ್ಟು ಎಂಬ ಲ್ಯಾಂಡ್ ಅಕ್ವಿಜೇಷನ್ ಆಕ್ಟಿನ ನಿಬಂಧನೆಗಳನುಸರಿಸಿ ಸಕಲಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ಪ್ರಸಿದ್ಧಪಡಿಸುವದೇನಂದರೆ, ಮೀನಾಕ್ಷಿಕೋಯಿಲ್ ಬೀದಿಯಲ್ಲಿರುವ ದಾದಾ ರಾಮಶೆಟ್ಟಿಯ ನಿವೇಶನದ ಪೈಕೀ ಒಂದು ಭಾಗವಾದ ಈ ಕೆಳಗೆ ವಿವರಿಸಿರುವ ಜಮೀನು ಸರ್ಕಾರ್ ಕೆಲಸದ ಬಗ್ಯೆ ಅಂದರೆ, ಬೆಂಗಳೂರು ಲಷ್ಕರ್‌ನಲ್ಲಿ ಸದರೀ ಮೀನಾಕ್ಷಿಕೋಯಿಲ್ ಬೀದಿಯನ್ನು ಆಗಲಪಡಿಸುವದಕ್ಕೋಸ್ಕರ ಬೇಕಾಗಿರುತ್ತೆ.

2. ಹಾಲೀ ಬೇಕಾಗಿರುವ ಜಮೀನು 104 ಸಲಗಜ ಮತ್ತು 2 ಸಲಅಡಿ ಯಿರುವದಲ್ಲದೆ, ಪೂರ್ವಕ್ಕೆ ಅನಂತಯ್ಯಶೆಟ್ಟಿ ನಿವೇಶನವೂ, ಪಶ್ಚಿಮಕ್ಕೆ 3ನೇ L. ನಂಬರ್ ಗಲ್ಲಿಯೂ, ಉತ್ತರಕ್ಕೆ ಮೀನಾಕ್ಷಿಕೋಯಿಲ್ ಬೀದಿಯೂ, ದಕ್ಷಿಣಕ್ಕೆ ದಾದಾ ರಾಮಶೆಟ್ಟಿ ನಿವೇಶನವೂ, ಯಿರುತ್ತೆ.

3. ಸದರೀ ಜಮೀನಿನ ನಕಷೆಯು ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫಿಸ್‌ನಲ್ಲಿ ನೋಡತಕ್ಕ ಬಗ್ಯೆ ಸಿದ್ಧವಾಗಿರುತ್ತೆ.

ನಂ. 347. ತಾರೀಖು 19ನೇ ಜನವರೀ 1876.

ನೀರಿಗೆ ದುರ್ಭಿಕ್ಷ ಉಂಟಾಗಿರುವದರಿಂದಲೂ, ಮತ್ತು ಬರುವ ತಿಂಗಳಲ್ಲಿ ವಿಸ್ತಾರವಾಗಿ ದನಗಳ ಮಂದೇ ಶೇರಿದಾಗ ಅದಕ್ಕೆ ಹುಲ್ಲು ವದಗಿಸುವದು ಕಷ್ಟವಾಗುವದಾದ್ದರಿಂದಲೂ, ಬೆಂಗಳೂರಲ್ಲಿ ವರುಷಂಪ್ರತಿ ನಡಿಯತಕ್ಕ ದನಗಳ ತಮಾಷೇಯೂ ಈ ವರುಷ ನಡಿಯುವದಿಲ್ಲವೆಂದು ಆಫೀಷಿಯೇಟಿಂಗ್ ಚೀಫ್ ಕಮಿಷನರವರು ಅಪ್ಪಣೇ ಕೊಡುತ್ತಾರೆ.

ನಂ. 350. ತಾರೀಖು 21ನೇ ಜನವರೀ 1876.

ಮೊಳಕಾಲ್ಮುರು ಪೇಷ್ಕಾರ್ ಶ್ರೀನಿವಾಸೈಯ್ಯಂಗಾರು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುವದಲ್ಲದೆ, 1872ನೇ ಇಸವಿ 10ನೇ ನಂಬರ್ ಆಕ್ಟಿನ 22ನೇ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ ಅಧಿಕಾರಗಳೂ ಮತ್ತು ಐರ್ಜ ಆಕ್ಟಿನ 23 (a) ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಿಸುವ ಅಧಿಕಾರಗಳೂ ಸಹಾ ಕೊಡಲ್ಪಟ್ಟಿರುತ್ತಾರೆ.

1 ಲಾಷ್ ದರಿಯಾಪ್ತಿ ಮಾಡತಕ್ಕ ಅಧಿಕಾರ, (ಸೆಕ್ಷನ್ 135.)

2 ವಿಚಾರಣೆ ಮಾಡಲಿಕ್ಕೆ ಅಧಿಕಾರವಿರುವ ಮೊಕದ್ದಮೆಗಳಲ್ಲಿ ತಕಸೀರುಗಳನ್ನು ಕುರಿತು ಮಾಡಲ್ಪಡುವ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳುವ ಅಧಿಕಾರ, (ಸೆಕ್ಷನ್. 141.)

ನಂ. 351. ತಾರೀಖು 22ನೇ ಜನವರೀ 1876.

ಸನ್ 1875ನೇ ಇಸವಿ ಡಿಶಂಬರ್ 31ನೇ ಮರ್ಕೂಂ 176ನೇ J. ನಂಬರ್ ಉಳ್ಳ ಮಂತ್ರಾಲೋಚಕ ಸಭೇಯೊಳಗಣ ಗವರ್ನರ್ ಜನರಲ್ ಸಾಹೇಬರವರಿಂದ ಕೊಡಲ್ಪಟ್ಟ ಇಸ್ತಿಹಾರ್ ದೆಶೇಯಿಂದ ಉಂಟಾದ ಅಧಿಕಾರವನ್ನು ಚಲಾಯಿಸುವದರಲ್ಲಿ ಆಫಿಷಿಯೇಟಿಂಗ ಚೀಫ್ ಕಮ್ಮಿಷನರ್ ಸಾಹೆಬರವರು ಅಪ್ಪಣೇ ಕೊಡುವದೇನಂದರೆ,—ಬ್ರಿಟಿಷ್ ಜನರೊಳು ಮದುವೆಗಳ ವಿಷಯದಲ್ಲಿ 1875ನೇ ಯಿಸವಿ ಸೆಪ್ಟಂಬರ್ 18ನೇ ಮರ್ಕೂಂ ಮೈಸೂರು ಗೆಜೆಟ 261ನೇ ಪುಟದಲ್ಲಿ ಪುನಶ್ಚ ಘೋಯಿಷ್ ಮಾಡಲ್ಪಟ್ಟ 1875ನೇ ಯಿಸವಿ

ಆಗಸ್ಟು 31ನೇ ಮುಕ್ಕಾಂ 1761ನೇ G. ನಂಬರ್ ಉಳ್ಳ ಮಂತ್ರಾಲೋಚಕ ಸಭೇಯೊಳಗಣ ಗವರ್ನರ್ ಜನರಲ್ ಯವರಿಂದ ಕೊಡಲ್ಪಟ್ಟ ಇಸ್ತಿಹಾರ್ ಮುಲಕ ವಿಧಿಸಲ್ಪಟ್ಟ ನಿಬಂಧನೆಗಳು, ವ ಫೀಜ್ ಜಂತ್ರಿಯು, ಮೈಸೂರು ನೇಟಿವ್ ಕ್ರಿಸ್ಟಿಯನ್ ಪ್ರಜೇಯಾಗಿಯೂ, ಮತ್ತು ಅವರಲ್ಲಿ ವೊಬ್ಬನೂ ಕ್ರಿಸ್ಟಿಯನ್ ಬ್ರಿಟಿಷ್ ಪ್ರಜೇ ಅಲ್ಲದೇಯೂ, ಯಿರುವ ಜನರೊಳು ಮದುವೆಗಳ ವಿಷಯದಲ್ಲಿ ಕೂಡಾ ಆಚರಿಸಲ್ಪಟ್ಟು ಅನುಸರಿಸಲ್ಪಡತಕ್ಕದ್ದು.

ನಂ. 352.	ತಾರೀಖು 22ನೇ ಜನವರೀ 1876.

ಸನ್ 1872ನೇ ಇಸವಿ 15ನೇ ನಂಬರ್ ಇಂಡ್ಯನ್ ಕ್ರಿಸ್ಟಿಯನ್ ಮ್ಯಾರೇಜ್ ಆಕ್ಟಿನ 85ನೇ ಸೆಕ್ಷನ್ ನಿಬಂಧನೆಗಳನುಸರಿಸಿ ಅಫಿಷಿಯೇಟಿಂಗ್ ಚೀಫ್ ಕಮಿಷನ್ನರ್ ಸಾಹೆಬರವರು ಮೈಸೂರು ಶೀಮೆಯ ಡಿವೀಜನ್‌ಗಳ ಕಮಿಷನ್ನರ್‌ಗಳನ್ನು ಸದರೀ ಆಕ್ಟಿನ ಕಾರ್ಯಗಳಿಗೋಸ್ಕರ ಡಿಸ್ಟ್ರಿಕ್ಟ ಜಡ್ಜ್‌ಗಳಾಗಿ ಯಿದರ ದೆಸೆಯಿಂದ ಮೊಕರರ್‌ಮಾಡುತ್ತಾರೆ.

ನಂ. 353.	ತಾರೀಖು 24ನೇ ಜನವರೀ 1876.

ಸನ್ 1875ನೇ ಇಸವಿ ಅಕ್ಟೋಬರ್ 12ನೇ ಮುಕ್ಕಾಂ 48ನೇ ನಂಬರ್ ಇಸ್ತಿಹಾರ್‌ನಲ್ಲಿ ಶಿವಮೊಗ್ಗಾ ಅಪಾತಿಕೇರಿ ಮೆಸ್ಟರ್ ಮೆಕ್‌ಫಾರ್ಲೇಡ ಯವರಿಗೆ ಕೊಡಲ್ಪಟ್ಟ 3 ತಿಂಗಳ ಪ್ರಿವಿಲೀಜ್ ರಜಾ, ಕಾಹಿಲೆ ರಜಾಕ್ಕೆ ಬದಲಾಯಿಸಲ್ಪಟ್ಟು 1876ನೇ ಇಸವಿ ಜನವರೀ 12ನೇ ಮುಕ್ಕಾಂ ಲಾಗಾಯತು 3 ತಿಂಗಳ ವರಿಗೂ ವಿಸ್ತರಿಸಲ್ಪಟ್ಟಿದೆ.

ನಂ. 354.	ತಾರೀಖು 24ನೇ ಜನವರೀ 1876.

ಆಲೂರು ಮುನಸಿಪ್ ಪೊನ್ನರಂಗಂಮೊದಲ್ಯಾರ್‌ರಿಗೆ ಸಿವಿಲ್ ಲೀವ್ ಕೋಡ್ F ಸಪ್ಲಿಮೆಂಟ್ 3ನೇ ಸೆಕ್ಷನ್ ಅನುಸರಿಸಿ, ಮೆಡಿಕಲ್ ಸರಟಿಫಿಕೇಟ್ ಮೇಲೆ 1875ನೇ ಇಸವಿ ನವೆಂಬರು 23ನೇ ಮುಕ್ಕಾಂ ಲಾಗಾಯತು ಆರು ವಾರಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 355.	ತಾರೀಖು 26ನೇ ಜನವರೀ 1876.

ಮಾಲೂರು ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಅಲ್ಲಿ ನಕ್ಕಿಬ್‌ಖಾನರು 1854ನೆ ಯಿಸವಿ 18ನೇ ಆಕ್ಟು 33ನೇ ಸೆಕ್ಷನ್ ಅನುಸರಿಸಿಯೂ, 1871ನೇ ಇಸವಿ 25ನೇ ಆಕ್ಟು ಅನುಸರಿಸಿಯೂ, ತಮ್ಮ ಅಧಿಕಾರ ಸರಹದ್ದಿಗೆ ವಳಪಟ್ಟ ಮತ್ತು ಜುರ್ಮಾನೇಯಿಂದ ಮಾತ್ರ ದಂಡಿಸಲ್ಪಡತಕ್ಕ ತಕಸೀರ್‌ಗಳನ್ನು ವಿಚಾರಣೆ ಮಾಡಲಿಕ್ಕೆ ಸದರೀ 18ನೇ ಆಕ್ಟಿನ 33ನೇ ಸೆಕ್ಷನ್ ಪ್ರಕಾರ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 356.	ತಾರೀಖು 26ನೇ ಜನವರೀ 1876.

ಮೆ॥ ಶ್ರೀನಿವಾಸರಾಯರು ಮೈಸೂರು ಡಿಸ್ಟ್ರಿಕ್ಟ ಟ್ರೆಜರೀ ಚಾರ್ಜನ್ನು 1876ನೇ ಯಿಸವಿ ಜನವರೀ 4ನೇ ಮುಕ್ಕಾಂ ಮಧ್ಯಾಹ್ನತ್ಪರ ಮೆ॥ ಷಣ್ಮುಗವೇಲು ಪಿಳ್ಳೇಯವರಿಗೆ ಕೊಟ್ಟರು.

ನಂ. 357.	ತಾರೀಖು 27ನೇ ಜನವರೀ 1876.

ಸನ್ 1870ನೇ ಇಸವಿ 10ನೇ ನಂಬರ್ ಲ್ಯಾಂಡ್ ಅಕ್ವಿಜೇಷನ್ ಆಕ್ಟು 4ನೇ ಸೆಕ್ಷನ್ನಿನ ನಿಬಂಧನೆಗಳನುಸರಿಸಿ ಯಿದರಿಂದ ಪ್ರಸಿದ್ಧ ಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟ ದೊಡ್ಡೇರಿ ತಾಲ್ಲೂಕು ಬಡವಾನ ಹಳ್ಳೀಯಲ್ಲಿರುವ ಈ ಕೆಳಗೆ ವಿವರಿಸಲ್ಪಟ್ಟ ಚಕ್ಕುಬಂದಿಗೆ ಶೇರಿದ ಜಮೀನ್ ಸರಕಾರ ಕೆಲಸಕ್ಕಾಗಿ ಅಂದರೆ, ಅಮೃತಮಹಲ್ ಯಿಲಾಖಾ ಪ್ರಯೋಜನಕ್ಕಾಗಿಯೂ, ಮತ್ತು ಸಾಮಾನ್ಯವಾಗಿ ಜನಗಳ ಪ್ರಯೋಜನಕ್ಕೋಸ್ಕರವೂ, ಹೊಟ್ಟಗನೆಂಬುವನಿಂದ ಕಟ್ಟಲ್ಪಟ್ಟ ಕೆರೆನೀರನ್ನು ಜಮಾಯಿಸುವದಕ್ಕೋಸ್ಕರ ಬೇಕಾಗಿರುತ್ತೆ.

37

ತಾಲ್ಲೂಕು ದೊಡ್ಡೇರಿ, ಹೋಬಳಿ ಪರಶುರಾಮಪುರ, ಗ್ರಾಮ ಬಡವಾನಹಳ್ಳಿ, ಪಟ್ಟಾದಾರನ ಹೆಸರು ಮಂಗೇರಹಳ್ಳೀ ತಿಮ್ಮನಮಗ ತಿಮ್ಮ, ಸರ್ವೇ ಬೀಜವರಿ ಖ. 5 ಗುಂ. 38, ಜೇರೀಜು ರೂ. 1 ಆ. 8, ಚಕ್ಕುಬಂದಿ ಪೂರ್ವಕ್ಕೆ ಬಿಳಿಗೆರೆ ಸರಹದ್ದಿನ ಎಲ್ಲೆ, ಪಶ್ಚಿಮಕ್ಕೆ ಕಾಪರಬಲ್ಲಿ ಅಮೃತ ಮಹಲ್ ಕಾವಲ್, ಉತ್ತರಕ್ಕೆ ಡಿಟೋ ಕಾವಲ್, ದಕ್ಷಿಣಕ್ಕೆ ಡಿಟೋ ಬಡವಾನಹಳ್ಳೀ ಅಮೃತ ಮಹಲ್ ಕಾವಲ್.

ನಂ. 358. ತಾರೀಖು 27ನೇ ಜನವರೀ 1876.

ಹುಲಿಯೂರುದುರ್ಗದ ಪೇಷ್ಕಾರ್ ಅಪ್ರಮ್ಯೈಯಂಗಾರ್ರು 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟು 1872 ನೇ ಯಿಸವಿ 10ನೇ ನಂಬರ್ ಆಕ್ಟಿನ 22ನೇ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ ಅಧಿಕಾರಗಳೂ ಐರ್ಜ ಆಕ್ಟಿನ 23 (a) ಸೆಕ್ಷನ್ ಅನುಸರಿಸಿ ಯಿದರಡಿ ನಮೂದಿಸಲ್ಪಡುವ ಅಧಿಕಾರಗಳೂ ಸಹಾ ಕೊಡಲ್ಪಟ್ಟಿರುತ್ತಾರೆ.

1. ಲಾಷ್ ದರಿಯಾಪ್ತು ಮಾಡತಕ್ಕ ಅಧಿಕಾರ (ಸೆ. 135.)

2. ವಿಚಾರಣೆ ಮಾಡಲಿಕ್ಕೆ ಅಧಿಕಾರವಿರುವ ಮೊಕದ್ದಮೆಗಳಲ್ಲಿ ತಕಸೀರುಗಳನ್ನು ಕುರಿತು ಮಾಡಲ್ಪಡುವ ಫಿರ್ಯಾದುಗಳನ್ನು ದಾಖಲ್ಮಾಡಿಕೊಳ್ಳುವ ಅಧಿಕಾರ (ಸೆ. 141.)

"ಬಮೋಜೀಬ್ ಹುಕ್ಕುಂ,"

J. S. F. MACKENZIE,
For Offg. Secretary.